
# ವೀಕ್ಷಕರ ಆಪೇಕ್ಷೆಯಂತೆ ಕಥೆ



**ಚೇತನ್ ಸೊಲಗಿ**
ಝೀ ಕನ್ನಡ
ಕಂಠದಾನ ಕಲಾವಿದ

◆ **ಗಾಯನ, ಬರಹ, ನಿರ್ದೇಶನ ಹೀಗೆ ಹಲವು ಕೆಲಸಗಳನ್ನು ಮಾಡಲು ಹೇಗೆ ಸಾಧ್ಯ?**

ಇದಕ್ಕೆ ಮೂಲ ನನ್ನ ಅಪ್ಪ ಎಂದು ಅಂದುಕೊಂಡಿದ್ದೇನೆ. ಅಪ್ಪ ನಿಂಗು ಸೊಲಗಿ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕ. ಅವರು ಪಿಎಚ್.ಡಿ. ಮಾಡಿದ್ದಾರೆ. ಮಕ್ಕಳ ಸಾಹಿತ್ಯ ಮತ್ತು ರಂಗಭೂಮಿಯಲ್ಲಿ ಕೆಲಸ ಮಾಡಿದ್ದಾರೆ. ಅಪ್ಪ ಯಾವತ್ತೂ ನನಗೆ ಇದನ್ನೇ ಮಾಡಬೇಕು ಎಂದು ಹೇಳುತ್ತಿರಲಿಲ್ಲ. ನನ್ನ ಇಷ್ಟದಂತೆ ನಾನು ಕೆಲಸ ಮಾಡಲು ಬಿಟ್ಟರು. ನನಗೆ 'ನಲಿಕಲಿ', 'ಚುಕ್ಕಿಚಿನ್ನ' ಶಿಕ್ಷಣ ಪದ್ಧತಿ ಕೂಡ ನನ್ನ ಬೆಳವಣಿಗೆಗೆ ಸಹಕಾರಿಯಾಗಿ ಬಂತು. ಆಗ ರೇಡಿಯೊ ಪಾಠಗಳಿಗೆ ಧ್ವನಿ ಕೊಡ್ತಾ ಇದ್ದೆ. ಶಾಲೆಯಲ್ಲಿ ನನ್ನ ಧ್ವನಿಯ ಪಾಠವನ್ನೇ ನಾನು ಕೇಳುತ್ತಿದ್ದೆ. ಆಗಲೇ ನಾನು ಬರವಣಿಗೆಯನ್ನು ರೂಢಿಸಿಕೊಂಡೆ. ಪತ್ರಿಕೆಗಳಿಗೆ ಬರವಣಿಗೆ ಆರಂಭವಾಯಿತು. 'ಸುಧಾ'ಕ್ಕೂ ಬರೆದಿದ್ದೇನೆ. ಅದೇ ಪತ್ರಿಕೋದ್ಯಮದಲ್ಲಿ ಓದಲು ಕಾರಣವಾಯಿತು. ಸಾಕ್ಷ್ಯಚಿತ್ರವನ್ನು ಮಾಡುವತ್ತ ಚಿತ್ತವನ್ನು ಹರಿಸಿತು. ಈಗ ಕಿರುತೆರೆಗೆ ಬಂದಿದ್ದೇನೆ. ಕಾಲೇಜಿನಲ್ಲಿ ಇದ್ದಾಗ ಕವಿತೆ ಬರೆಯುತ್ತಿದ್ದೆ. ಅದೇ ಇಲ್ಲಿ ಹಾಡನ್ನು ಬರೆಯಲು ಸಹಕಾರಿಯಾಗಿದೆ. ಸದ್ಯ ಝೀ ಕನ್ನಡದ ಕ್ಲಸ್ಟರ್ ಮುಖ್ಯಸ್ಥನಾಗಿದ್ದೇನೆ. ಝೀ ಕನ್ನಡ ಎಲ್ಲ ಪ್ರೋಮೊಗಳಿಗೆ ಕಂಠದಾನ ಕಲಾವಿದನಾಗಿಯೂ ಕೆಲಸ ಮಾಡುತ್ತೇನೆ. 'ಅಮೃತಧಾರೆ', 'ಅಣ್ಣಯ್ಯ' ಧಾರಾವಾಹಿಗಳಿಗೆ ಸಂಬಂಧಿಸಿದಂತೆ ನಿರ್ಮಾಣ ಸಂಸ್ಥೆ ಮತ್ತು ವಾಹಿನಿ ನಡುವಿನ ಸೇತುವೆಯಂತೆ ಕೆಲಸ ನಿರ್ವಹಿಸಬೇಕಾಗುತ್ತದೆ. ಪಾತ್ರಗಳ ಕಾಸ್ಟ್ಯೂಮ್ ಡಿಸೈನ್, ದೃಶ್ಯದ ಸ್ವರೂಪ ಹೇಗಿರಬೇಕು ಎನ್ನುವ ಸ್ಪಷ್ಟನೆಯನ್ನು ನೀಡುವ ಕೆಲಸ. ಯಾವುದೇ ಕಥೆ ಮತ್ತು ಪಾತ್ರದ ವಿನ್ಯಾಸಕ್ಕೆ ಸಂಶೋಧನೆ ನಡೆದಿರುತ್ತದೆ ಅದನ್ನು ನಮ್ಮ ಕತೆಗೆ ಅಳವಡಿಸುತ್ತೇವೆ.

◆ **ಸೀರಿಯಲ್‌ನಲ್ಲಿ ಸಂಗೀತ ಹಿನ್ನೆಲೆಗೆ ಸರಿದಿದೆ ಎನ್ನುವುದಕ್ಕೆ ಏನು ಹೇಳುತ್ತೀರಿ?**

ಮೊದಲು ಆರಂಭದಲ್ಲಿಯೇ ಹಾಡು ಬರುತ್ತಿತ್ತು. ನಂತರ ಅದು ನಿಂತೇ ಹೋಗಿದ್ದು ನಿಜ. 'ಜೊತೆ ಜೊತೆಯಲಿ' ಧಾರಾವಾಹಿಯಿಂದಲೇ ಅದನ್ನು ನಾವು ಬ್ರೇಕ್ ಮಾಡಿದ್ದೇವೆ. ಹಿಂದಿನಂತೆ ಕಂತಿನ ಆರಂಭದಲ್ಲಿ ಹಾಕುತ್ತಿಲ್ಲ. ಸಂದರ್ಭಕ್ಕೆ ತಕ್ಕಂತೆ ಗೀತೆಯನ್ನು ಬಳಸುತ್ತೇವೆ. ಹಾಡನ್ನು ಪಲ್ಲವಿ ಅಥವಾ ಒಂದೆರಡು ಚರಣಕ್ಕೆ ನಿಲ್ಲಿಸಿರುವುದಿಲ್ಲ. ಎಂಟು ಹತ್ತು ಚರಣ ಬರೆದಿರುತ್ತೇವೆ. ಸಂದರ್ಭಕ್ಕೆ ಅನುಸಾರವಾಗಿ ಪುಟ್ಟ ಭಾಗವನ್ನು ಅಳವಡಿಸುತ್ತೇವೆ. ಸಿನಿಮಾ ರೀತಿಯಲ್ಲಿ ರಿ ರೆಕಾರ್ಡ್ ಕೂಡ ಮಾಡುತ್ತೇವೆ. 'ಅಣ್ಣಯ್ಯ', 'ಲಕ್ಷ್ಮೀನಿವಾಸ', 'ಅಮೃತಧಾರೆ'ಯಲ್ಲಿ ಆ ಪ್ರಯೋಗವನ್ನು ನೋಡಬಹುದು. ಮತ್ತೆ ಆ ಸಂಪ್ರದಾಯ ಬಂದಿದೆ ಎಂದು ಅನ್ನಿಸುತ್ತದೆ. ಟ್ಯೂನ್ ಒಂದೇ ರೀತಿ ಇರುತ್ತದೆ. ಆದರೆ ಲಿರಿಕ್ಸ್ ಬೇರೆ ಬೇರೆ ಬರುತ್ತದೆ. ಜನರ ಕಮೆಂಟ್ ನೋಡಿದಾಗ ಆ ಬಗ್ಗೆ ಮೆಚ್ಚುಗೆಯಂತೂ ವ್ಯಕ್ತವಾಗಿದೆ.

◆ **ದೃಶ್ಯ ಬೇರೆ ಇದ್ದರೂ ಕಥೆಗಳು ಒಂದೇ ರೀತಿ ಏಕೆ ಅನ್ನಿಸುತ್ತವೆ?**

ಎಲ್ಲ ಧಾರಾವಾಹಿ ಒಂದೇ ರೀತಿ ಅನ್ನಿಸಬಾರದು ಎನ್ನುವ ನಿಟ್ಟಿನಲ್ಲಿಯೇ ಕೆಲಸ ಮಾಡುತ್ತೇವೆ. ಕೆಲವೊಂದು ಸಾಂಪ್ರದಾಯಿಕ ಹಬ್ಬ ಹುಣ್ಣಿಮೆಯ ಸನ್ನಿವೇಶಗಳಲ್ಲಿ ಹಾಗೆ ಆಗುವುದು ಸಹಜ. ಪ್ರೀತಿಯನ್ನು ಪ್ರಕಟಿಸುವುದು ಒಂದೇ ರೀತಿ ಇದ್ದರೂ ಕಥೆಗೆ ಭಿನ್ನ ಛಾಯೆ ಖಂಡಿತ ಇರುತ್ತದೆ. ನಮ್ಮಲ್ಲಿನ ಕಥೆಗಳ ಹಾದಿ ಕೂಡ ಬೇರೆ. ಪ್ರೋಮೊ ಪ್ರೊಜೆಕ್ಷನ್ ಒಂದೇ ರೀತಿ ಅನ್ನಿಸಬಹುದು. ಕಥೆ ಸಂಪೂರ್ಣ ಭಿನ್ನವೇ ಆಗಿರುತ್ತದೆ. ಅದನ್ನು ಹೊರತಾಗಿ ಹಾಗೇನಾದರೂ ಆದರೆ ಅದು ಆಕಸ್ಮಿಕ. ಇದೇ ರೂಪದಲ್ಲಿ ಮಾಡಬೇಕು ಅಥವಾ ನಕಲು ಮಾಡುವ ಉದ್ದೇಶ ಇರುವುದಿಲ್ಲ.

◆ **ಕಥೆಯ ವಿಸ್ತರಣೆಗೆ ಏನೆಲ್ಲ ನೆರವು ತೆಗೆದುಕೊಳ್ಳುತ್ತೀರಿ?**

ಕಥೆ ಆರಂಭದಂತೆ ಇಲ್ಲಿಗೆ ಪೂರ್ಣಗೊಳಿಸಬೇಕು ಎನ್ನುವುದು ನಿರ್ಧಾರಿತ. ಆರಂಭದಿಂದ ಅಂತ್ಯಕ್ಕೆ ಪಯಣಿಸುವುದೇ ಸೀರಿಯಲ್ ಸರಣಿ. ಇಲ್ಲಿಂದ ಇಲ್ಲಿಗೆ ಕಂತು ಎಂದೂ ವರ್ಗೀಕರಣ ಮಾಡಿಕೊಂಡಿರುತ್ತೇವೆ. ಯಾವುದೋ ಒಂದು ಸನ್ನಿವೇಶ ವೀಕ್ಷಕರಿಗೆ ಇಷ್ಟ ಆಗುತ್ತದೆ ಎಂದು ಅನ್ನಿಸಿದರೆ, ಆ ಎಳೆಯನ್ನು ವಿಸ್ತರಿಸುತ್ತೇವೆ. ಅಲ್ಲಿ ಕಥೆಯ ಮೂಲ ಸ್ವರೂಪಕ್ಕೆ ಬದಲಾವಣೆಯನ್ನು ತಂದಿರುವುದಿಲ್ಲ. ಉದಾಹರಣೆಗೆ ನಾಯಕ–ನಾಯಕಿಯ ಸಲ್ಲಾಪ, ಇಲ್ಲವೇ ಜಗಳವನ್ನು ನೋಡಲು ಇಷ್ಟಪಡ್ತಿದ್ದಾರೆ ಅನ್ನುವುದಾದರೆ ಇನ್ನೂ ನಾಲ್ಕಾರು ಅಧಿಕ ದೃಶ್ಯಗಳನ್ನು ಮಾಡುತ್ತೇವೆ. ಕಥೆಯಲ್ಲಿ ಬದಲಾಯಿಸುವುದು ತುಂಬ ಕಡಿಮೆ. ಸುಮ್ಮನೆ ಏನನ್ನೂ ಬರೆಯುವುದಿಲ್ಲ. ಜನರ ಪ್ರತಿಕ್ರಿಯೆಯ ಮೇಲೆ ತಿದ್ದುತ್ತೇವೆ. ಕಥೆಯನ್ನು ಎಳೆಯುವ ಟ್ರೆಂಡ್ ಕೂಡ ಕಡಿಮೆಯಾಗುತ್ತಿದೆ. ಬಹುತೇಕ ಧಾರಾವಾಹಿಗಳ ಕಥೆಗೆ ವೇಗ ಸಿಕ್ಕಿದೆ.

◆ **ನಿಮ್ಮ ಅಭಿರುಚಿಗೆ, ಕೆಲಸ ಹೇಗೆ ಅನ್ನಿಸುತ್ತಿದೆ?**

ಈ ಪ್ರಶ್ನೆಯನ್ನು ನನ್ನ ಗೆಳೆಯರು ಸೇರಿದಂತೆ ಅಪ್ಪ ಕೂಡ ಕೇಳುತ್ತಾರೆ. ಸಮುದಾಯದ ಹೊರಗಿರಬೇಕು ಎಂದು ನಾನು ಬಯಸುವುದಿಲ್ಲ. ಇಲ್ಲಿ ನಾನು ಒಂದು ಪದ ಬರೆದರೆ ಅದು ತುಂಬ ಜನರಿಗೆ ಮುಟ್ಟುತ್ತದೆ. 'ಅಮೃತಧಾರೆ'ಯಲ್ಲಿ ಗೌತಮ್ ದಿವಾನ್ ಸರ್ಕಾರಿ ಶಾಲೆಯನ್ನು ದತ್ತು ತೆಗೆದುಕೊಳ್ಳುತ್ತಾರೆ. ಅದಕ್ಕೆ ಸಿಕ್ಕಾಪಟ್ಟೆ ಒಳ್ಳೆಯ ಪ್ರತಿಕ್ರಿಯೆ ಬಂದಿವೆ. ಕುಡಿತದ ಅಪಾಯ ಇರಬಹುದು, ಓದು ಬರಹ ಗೊತ್ತಿಲ್ಲದ ವರನನ್ನೂ ಓದಿದ ವಧು ಮದುವೆ ಆದರೂ ಸಂಸಾರ ಚೆನ್ನಾಗಿಯೇ ಇರುತ್ತದೆ ಎನ್ನುವುದನ್ನೂ ಹೇಳುತ್ತೇವೆ. ಇಲ್ಲಿ ಬಹುದೊಡ್ಡ ವೀಕ್ಷಕರ ಗುಂಪಿಗೆ ಹೇಳುತ್ತೇವೆ. ಇದನ್ನೇ ಕೃತಿ ರೂಪದಲ್ಲಿ ಹೇಳಿದರೆ ಆ ಪ್ರಮಾಣದಲ್ಲಿ ತಲುಪಲು ಆಗುವುದಿಲ್ಲ.

■ ರಾಘವೇಂದ್ರ ಕೆ.